# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

**Email Id: sadpidped@gmail.com** **Phone No: 080-23460525**


**ಸಂಖ್ಯೆ: W1/ಪರೀಕ್ಷಾ ಕಾರ್ಯ-11/2020-21** **ದಿನಾಂಕ: 01/07/2021**

## ಅಧಿಸೂಚನೆ

ವಿಷಯ:- ಆಗಸ್ಟ್-2021ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ಡಿ.ಪಿಇಡಿ ಪರೀಕ್ಷೆಗೆ ರಾಜ್ಯದ ಸರ್ಕಾರಿ ಡಿ.ಪಿಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1. ದಿನಾಂಕ:28/08/2020ರಂದು ಡಿ.ಎಸ್.ಇ.ಆರ್.ಟಿ.ಯಲ್ಲಿ ನಡೆದ ಸಭೆಯ ನಡಾವಳಿ.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಸುತ್ತೋಲೆ ಸಂಖ್ಯೆ:ಶಿತ2/ಡಿಪಿಐ/ಡಿಎಸ್ಇಆರ್‌ಟಿ/ಡಿ.ಇಡಿಕಾ/05/2020-21; ದಿನಾಂಕ:02.09.2020.

************

2020-21ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಡಿ.ಪಿಇಡಿ ವಾರ್ಷಿಕ ಕಾರ್ಯ ಯೋಜನೆಯಂತೆ ಪ್ರಥಮ ಮತ್ತು ದ್ವಿತೀಯ ಡಿ.ಪಿಇಡಿ ಹೊಸ ಮತ್ತು ಪುನರಾವರ್ತಿತ ಅಭ್ಯರ್ಥಿಗಳಿಗೆ ಲಿಖಿತ (ಥಿಯರಿ) ಪರೀಕ್ಷೆಯನ್ನು ದಿನಾಂಕ:05/08/2021 ರಿಂದ ದಿನಾಂಕ:10/08/2021 ರವರೆಗೆ ನಡೆಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 2019-20ನೇ ಸಾಲಿನಿಂದ ಡಿ.ಪಿಇಡಿ ಪರೀಕ್ಷಾ ಪ್ರಕ್ರಿಯೆಗಳನ್ನು Online ವ್ಯವಸ್ಥೆಗೆ ತರಲಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಡಿ.ಪಿಇಡಿ ಪರೀಕ್ಷೆಗೆ Online ಮೂಲಕ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಹೊರಡಿಸಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಸರ್ಕಾರಿ ಡಿ.ಪಿಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಡಿ.ಪಿಇಡಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುತ್ತಾರೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಅರ್ಜಿ ನಮೂನೆಯಲ್ಲಿ ಮಂಡಳಿಯ **https://sslc.karnataka.gov.in** ಜಾಲತಾಣದಲ್ಲಿ Login/Other Exams/DPEd Examination ನಲ್ಲಿ Institute Login ಮೂಲಕ ದಾಖಲಾತಿ ಮಾಹಿತಿಗಳನ್ನು Upload ಮಾಡಲು ಸೂಚಿಸಲಾಗಿತ್ತು ಅದರಂತೆ ಸಂಸ್ಥೆಗಳ ಮುಖ್ಯಸ್ಥರು ಕ್ರಮವಹಿಸಿ ಅಭ್ಯರ್ಥಿಗಳ ದಾಖಲಾತಿ ಮಾಹಿತಿಗಳನ್ನು Upload ಮಾಡಿರುತ್ತಾರೆ.

ಮುಂದುವರೆದು ಸದರಿ ಅಭ್ಯರ್ಥಿಗಳನ್ನು ಆಗಸ್ಟ್-2021ರ ಮಾಹೆಯಲ್ಲಿ ನಡೆಯುವ ಡಿ.ಪಿ.ಇಡಿ ಪರೀಕ್ಷೆಗೆ ನೋಂದಣಿ ಮಾಡಲು ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

## 1. ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

**(ಆನ್-ಲೈನ್ ನಲ್ಲಿ ಸಂಸ್ಥೆಗಳ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿ ಅಪ್-ಲೋಡ್ ಮಾಡುವುದು. ಮಾನ್ಯತೆ ನವೀಕರಣ ಶುಲ್ಕ ಪಾವತಿಸುವ ಹಾಗೂ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಅನುಕೂಲವಾಗುವಂತೆ FlowChart ನೀಡಲಾಗಿದ್ದು ಅದನ್ನು ಕಡ್ಡಾಯವಾಗಿ ಓದಿಕೊಳ್ಳುವುದು).**

1 **ಕಡ್ಡಾಯವಾಗಿ ಡಿ.ಪಿ.ಇಡಿ ಕಾಲೇಜಿನ ಪ್ರಸಕ್ತ ವರ್ಷದ ಮಾನ್ಯತೆ/ಮಾನ್ಯತೆ ನವೀಕರಣ ಪಡೆದಿರುವುದಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಜ್ಞಾಪನ ಪತ್ರದ ಪ್ರತಿಯನ್ನು pdf ನಮೂನೆ (Up to 1mb size)** ಯಲ್ಲಿ Upload ಮಾಡಬೇಕು. ಇದನ್ನು ಆಯಾ ಡಯಟ್‌ಗಳು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

2 ಡಿ.ಪಿ.ಇಡಿ ಕಾಲೇಜುಗಳ ನೋಂದಣಿ ಶುಲ್ಕ ರೂ.1300-00ಗಳನ್ನು ಲಾಗಿನ್‌ನಲ್ಲಿ ಲಭ್ಯವಾಗುವ Online Challan ಮೂಲಕ ಪಾವತಿಸಬೇಕು. ಚಲನ್‌ನ ಜೆರಾಕ್ಸ್ ಪ್ರತಿಯನ್ನು ಪ್ರತ್ಯೇಕವಾಗಿ ಡಯಟ್ ಮೂಲಕ ಮಂಡಳಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

3 ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿ ಡಯಟ್‌ನಿಂದ ಅನುಮೋದನೆಯಾದ ನಂತರ ಡಿ.ಪಿ.ಇಡಿ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಗೆ ಸಂಬಂಧಿಸಿದ **RF(Regular Fresh)** ಅಭ್ಯರ್ಥಿಗಳ ಮಾಹಿತಿಗಳನ್ನು ಸಂಸ್ಥೆಯ ಲಾಗಿನ್‌ನಲ್ಲಿರುವ ನಾಮಿನಲ್ ರೋಲನ್ನು ಪರಿಶೀಲಿಸಿ ಅಭ್ಯರ್ಥಿಗಳ ಮಾಹಿತಿ ಮತ್ತು ಅಭ್ಯರ್ಥಿಗಳ ಸಂಖ್ಯೆಗಳನ್ನು ಅಂತಿಮಗೊಳಿಸುವುದು.

4 ಒಂದು ವೇಳೆ ಅಭ್ಯರ್ಥಿಗಳ ಮಾಹಿತಿಗಳಲ್ಲಿ ಯಾವುದಾದರೂ ಅಗತ್ಯ ತಿದ್ದುಪಡಿಗಳಿದ್ದಲ್ಲಿ Update application ಆಯ್ಕೆ ಬಳಸಿ ಸರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಕೊನೆಯ ದಿನಾಂಕದೊಳಗೆ ಮಾಡಿದ ತಿದ್ದುಪಡಿಗಳನ್ನು ಮಾತ್ರ ಪರಿಗಣಿಸಲಾಗುವುದು.

5 **ಪುನರಾವರ್ತಿತ (RR-Regular Repeater)** ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅಕ್ಟೋಬರ್-2020ರ ಮುಖ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ಡಿ.ಪಿ.ಇಡಿ ವಿದ್ಯಾರ್ಥಿಗಳ ಎಂ.ಎಸ್.ಎ (Marks Statement Cum Applications) ಗಳ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ಅಳವಡಿಸಲಾಗಿದೆ. ಈ ವಿದ್ಯಾರ್ಥಿಗಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ನಿಗಧಿತ ಶುಲ್ಕ ಪಾವತಿಸಿ ಸಲ್ಲಿಸುವುದು. ಅನುತ್ತೀರ್ಣ ವಿದ್ಯಾರ್ಥಿಗಳ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 KB ಅಳತೆ ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.

6 RF(Regular Fresh) ಮತ್ತು RR(Regular Repeater) ಅಭ್ಯರ್ಥಿಗಳ ಅರ್ಜಿಗಳನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು DIET Loginನಲ್ಲಿ ಪರಿಶೀಲಿಸಿ ಅನುಮೋದನೆ ಮಾಡುವುದು.

7 ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು.

8 ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಸಹ ಪರೀಕ್ಷಾ ಶುಲ್ಕ, ಅರ್ಜಿ ಶುಲ್ಕ ಮತ್ತು ಫಲಿತಾಂಶ ತಿಳಿಸುವ ಶುಲ್ಕವನ್ನು ಪಾವತಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿ ಪಡೆಯುವುದು.

9 Online ಮೂಲಕ ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ನಿಗಧಿಪಡಿಸಿದ ದಿನಾಂಕದೊಳಗೆ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು. ಡಯಟ್ ಸಂಸ್ಥೆಯವರು ಅನುಮೋದನೆ ಮಾಡಿದ ನಂತರ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

10 ನಿಗದಿಪಡಿಸಿದ ದಿನಾಂಕದ ನಂತರ ವಿಷಯ/ಮಾಧ್ಯಮ ಇತ್ಯಾದಿ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ತಿದ್ದುಪಡಿಗೆ ಮಂಡಳಿ ಹಂತದಲ್ಲಿ **ರೂ.200.00** ದಂಡ ಪಾವತಿಸಿ ಸರಿಪಡಿಸಿಕೊಳ್ಳಬಹುದಾಗಿದೆ.

11 ಮಂಡಳಿಯ ಗಮನಕ್ಕೆ ತರದೇ ಅಭ್ಯರ್ಥಿಗಳ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶ ಇರುವುದಿಲ್ಲ.

12 ಆನ್‌ಲೈನ್‌ನಲ್ಲಿ ವಿದ್ಯಾರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ವಿದ್ಯಾರ್ಥಿಯ ಬದಲು ಬೇರೆ ವಿದ್ಯಾರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ

ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

13 ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಡಯಟ್‌ಗೆ ಸಲ್ಲಿಸುವುದು.

14 ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮುಖಾಂತರ ದ್ವಿತೀಯ ಡಿ.ಪಿ.ಇಡಿ ಅಭ್ಯರ್ಥಿ ದಾಖಲಾಗಿದ್ದರೆ, ಅಂತಹ ಅಭ್ಯರ್ಥಿಯ ಹೆಸರನ್ನು ದ್ವಿತೀಯ ಡಿ.ಪಿ.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಸೇರ್ಪಡೆ ಮಾಡುವುದು. ಅಲ್ಲದೇ ಯಾವ ಸಂಸ್ಥೆಯಿಂದ ವರ್ಗಾವಣೆ ಹೊಂದಿದ್ದಾರೆ ಎಂಬುದಕ್ಕೆ ಷರಾ ಕಾಲಂನಲ್ಲಿ ಸಂಸ್ಥೆಯ ಸಂಕೇತ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು. ಈ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದ ಆದೇಶದ ಪ್ರತಿ ಸಲ್ಲಿಸುವುದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಡಿ.ಪಿ.ಇಡಿ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

## 2. ದಾಖಲಾತಿ ಅನುಮೋದನಾ ಪಟ್ಟಿ:-

ಸರ್ಕಾರಿ ಡಿ.ಪಿಇಡಿ ಸಂಸ್ಥೆಗಳು ಹಾಗೂ ಮಾನ್ಯತೆ ಪಡೆದು ಅಸ್ತಿತ್ವದಲ್ಲಿರುವ ಖಾಸಗಿ ಡಿ.ಪಿಇಡಿ ಕಾಲೇಜುಗಳಿಗೆ ಸಂಬಂಧಿಸಿದಂತೆ, ಉಲ್ಲೇಖ(2)ರ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ನಿರ್ದೇಶನ ಮತ್ತು ಮಾರ್ಗದರ್ಶನಗಳಂತೆ, ಜಿಲ್ಲಾ ಡಯಟ್ ಪ್ರಾಂಶುಪಾಲರು ಡಿ.ಪಿಇಡಿ ವಿದ್ಯಾರ್ಥಿಗಳ ನಾಮಪಟ್ಟಿಯನ್ನು (Nominal Roll) ಪರಿಶೀಲಿಸಿ ಅನುಮೋದಿಸುವುದು.

## 3. ಪರೀಕ್ಷಾ ಶುಲ್ಕದ ವಿವರ:-

| ಕ್ರ.ಸಂ. | ಪರೀಕ್ಷಾ ವಿಷಯಗಳ ವಿವರ | ಪರೀಕ್ಷಾ ಶುಲ್ಕ |
|---|---|---|
| 1. | ಡಿ.ಪಿ.ಇಡಿ. Ist year ಕೋರ್ಸ್ ಪರೀಕ್ಷೆಯ ಎಲ್ಲ 1,2,3 ಭಾಗಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳು. | 1054-00 |
| 2 | ಡಿ.ಪಿ.ಇಡಿ. II year ಕೋರ್ಸ್ ಪರೀಕ್ಷೆಯ ಎಲ್ಲ 1,2,3 ಭಾಗಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳು. | 1092-00 |
| 3 | ಭಾಗ-1 ತಾತ್ವಿಕ ಪರೀಕ್ಷೆ ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು.(ಒಂದು ವಿಷಯಕ್ಕೆ) | 234-00 |
| 4 | ಭಾಗ-1 ಆಂತರಿಕ ಪರೀಕ್ಷೆ ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು. | 156-00 |
| 5 | ಭಾಗ-2 ಸ್ಕಿಲ್ಸ್ ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು. | 234-00 |
| 6 | ಭಾಗ-3 ಟೀಚಿಂಗ್ ಮತ್ತು ಅಫಿಶಿಯೇಟಿಂಗ್ ತೆಗೆದುಕೊಳ್ಳಲಿರುವ ಅಭ್ಯರ್ಥಿಗಳು. | 234-00 |
| 7 | ಅರ್ಜಿ ಶುಲ್ಕ ರೂ.40/- ಹಾಗೂ ಫಲಿತಾಂಶ ಶುಲ್ಕ ರೂ.25/- (ಪ್ರಥಮ ಮತ್ತು | 65-00 |

| | | |
|---|---|---|
| | ದ್ವಿತೀಯ ವರ್ಷದ ಎಲ್ಲಾ ಅಭ್ಯರ್ಥಿಗಳು) | |
| 8 | ಲ್ಯಾಮಿನೇಷನ್ ಶುಲ್ಕ ಪ್ರಥಮ ವರ್ಷದ ಅಂಕಪಟ್ಟಿಗೆ (ಪ್ರಥಮ ವರ್ಷದ ಹೊಸ ಅಭ್ಯರ್ಥಿಗಳು) | 25–00 |
| 9 | ಲ್ಯಾಮಿನೇಷನ್ ಶುಲ್ಕ ದ್ವಿತೀಯ ವರ್ಷದ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಕ್ಕೆ (ದ್ವಿತೀಯ ವರ್ಷದ ಹೊಸ ಅಭ್ಯರ್ಥಿಗಳು) | 50–00 |

**(ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಸಹ ಪರೀಕ್ಷಾ ಶುಲ್ಕ, ಅರ್ಜಿ ಶುಲ್ಕ ಮತ್ತು ಫಲಿತಾಂಶ ತಿಳಿಸುವ ಶುಲ್ಕವನ್ನು ಪಾವತಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿ ಪಡೆಯುವುದು.)**

**ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ**

- ಈಗಾಗಲೇ ಸಂಸ್ಥೆಗಳ ಅಭ್ಯರ್ಥಿಗಳ ಮಾಹಿತಿಯನ್ನು ಸಂಸ್ಥೆಯ ಲಾಗಿನ್‌ನಲ್ಲಿ Update ಮಾಡಿರುವನ್ವಯ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸದರಿ ಚಲನ್ ಅನ್ನು Login ನಿಂದ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.
- ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್ ಅಥವಾ ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕು.
- **ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.**

**4. ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ.**

| ಕ್ರ.ಸಂ | ವಿವರ | ದಿನಾಂಕ: |
|---|---|---|
| **01** | ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಪ್ರಕಟಣೆ ದಿನಾಂಕ | **02/07/2021** |
| **02** | ಸಂಸ್ಥೆಯ ಲಾಗಿನ್‌ನಲ್ಲಿ ಮಾನ್ಯತೆ ನವೀಕರಣ ಪ್ರತಿಯನ್ನು ಅಪ್‌ಲೋಡ್ ಮಾಡುವುದು ಹಾಗೂ ನೊಂದಣಿಶುಲ್ಕ 1300/–ಗಳನ್ನು ಪಾವತಿಸುವ ದಿನಾಂಕ | **06/07/2021** |
| **03** | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | **06/07/2021** |
| **04** | ಮಾನ್ಯತೆ ಪಡೆದ ಡಿ.ಪಿ.ಇಡಿ ಸಂಸ್ಥೆಗಳ ಮಾನ್ಯತೆ ನವೀಕರಣದ ಪ್ರತಿಯನ್ನು ಡಯಟ್ ಹಂತದಲ್ಲಿ ಅನುಮೋದಿಸುವುದು | **06/07/2021** ರಿಂದ **08/07/2021** |
| **05** | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **13/07/2021** |
| **06** | ದಂಡ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **15/07/2021** |
| **07** | ಆಗಸ್ಟ್–2021 ರ ಡಿ.ಪಿ.ಇಡಿ ಪರೀಕ್ಷೆಗೆ ಆನ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | **17/07/2021** |

| | | |
|---|---|---|
| 08 | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 20/07/2021 |
| 09 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಭಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 22/07/2021 |
| 10 | ಪ್ರವೇಶ ಪತ್ರ ಗಳನ್ನು ಆನ್‌ಲೈನ್‌ಅಲ್ಲಿ ಪ್ರಕಟಿಸುವ ದಿನಾಂಕ | 26/07/2021 |
| 11 | ಸಿಏನ್‌ಆರ್ ಮತ್ತು ಎ.ಎಂ.ಎಲ್ ಗಳನ್ನು ಪರೀಕ್ಷಾ ಕೇಂದ್ರದ ಲಾಗಿನ್‌ನಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ | 03/08/2021 |

**5. ಪುನರ್ ದಾಖಲಾತಿ ಹೊಂದಿರುವ ವಿದ್ಯಾರ್ಥಿಗಳ ಮಾಹಿತಿ ಬಗ್ಗೆ:-**

ದ್ವಿತೀಯ ಡಿ.ಪಿ.ಇಡಿಗೆ ಜಿಲ್ಲೆಯೊಳಗೆ ಪುನರ್‌ದಾಖಲಾತಿಯಾಗಿದ್ದಲ್ಲಿ, ಜಿಲ್ಲಾ ಡಯಟ್ ಪ್ರಾಂಶುಪಾಲರ ಜ್ಞಾಪನ ಆದೇಶವಿರಬೇಕು. ಅಂತರ್ ಜಿಲ್ಲಾ ಪುನರ್ ದಾಖಲಾತಿಯಾಗಿದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಂದ ಅನುಮತಿ ಪಡೆದಿರುವ ಜ್ಞಾಪನ ಆದೇಶವಿರಬೇಕು. ದ್ವಿತೀಯ ಡಿ.ಪಿ.ಇಡಿಗೆ ಪುನರ್ ದಾಖಲಾತಿ ಹೊಂದುವ ಅಭ್ಯರ್ಥಿಗಳು ಪರಿಷ್ಕೃತ ಪಠ್ಯವಸ್ತುವಿನಂತೆ (Revised Syllabus) ನಂತೆ ಪರೀಕ್ಷೆ ಬರೆಯಬೇಕು. ವರ್ಗಾವಣೆ ಅಥವಾ ಪುನರ್‌ದಾಖಲಾತಿಗೆ ಸಂಬಂಧಿಸಿದಂತೆ ಡಯಟ್ ಪ್ರಾಂಶುಪಾಲರ ಹಂತದಲ್ಲಿಯೇ ಪರಿಶೀಲಿಸಿ ಅನುಮೋದಿಸುವುದು. ಈ ಮಾಹಿತಿಯನ್ನು ಡಯಟ್‌ನಿಂದ ಮಂಡಳಿಗೆ ಸಲ್ಲಿಸಿದ ನಂತರ Online ನಲ್ಲಿ ಸಂಬಂಧಿಸಿದ ಅಭ್ಯರ್ಥಿಯ ಅರ್ಜಿಯನ್ನು Upload ಮಾಡಲಾಗುವುದು.

**6. ಐಚ್ಛಿಕವಿಷಯದ ಆಯ್ಕೆ:-**

ಐಚ್ಛಿಕ ವಿಷಯಗಳ ಆಯ್ಕೆಯಲ್ಲಿ ಅಭ್ಯಥಿಯು ಒಂದು ಐಚ್ಛಿಕ ವಿಷಯವನ್ನು ಮಾತ್ರ ಆಯ್ಕೆ ಮಾಡಬೇಕು. ಹೀಗೆ ಆಯ್ಕೆ ಮಾಡುವಾಗ ತಪ್ಪಾಗಿ ಆಯ್ಕೆ ಮಾಡಿದರೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

**7. ಹಾಜರಾತಿ ವಿನಾಯಿತಿ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಪಿ.ಇಡಿ ಹೊಸ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇಕಡ 80ರಷ್ಟು ಹಾಜರಾತಿ ಇರುವುದು ಕಡ್ಡಾಯ. ಶೇಕಡ 80ರಷ್ಟು ಹಾಜರಾತಿ ಇಲ್ಲದ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಶೇ.10ರಷ್ಟು ವಿನಾಯಿತಿಯನ್ನು ನೀಡಲು ಸಂಸ್ಥೆಯ ಪ್ರಾಂಶುಪಾಲರಿಗೆ ಅವಕಾಶವಿದೆ ಹಾಗೂ ಮಂಡಳಿಯು ಹೆಚ್ಚುವರಿಯಾಗಿ ಶೇ.05ರಷ್ಟು ಗೈರುಹಾಜರಿಯನ್ನು ಮನ್ನಾ ಮಾಡುತ್ತದೆ. ಅಂದರೆ, ಸಂಸ್ಥೆಯ ಪ್ರಾಂಶುಪಾಲರು ನೀಡುವ ಶೇ10ರ ವಿನಾಯಿತಿ ನಂತರ ಶೇ 5ರಷ್ಟು ಹಾಜರಾತಿ ವಿನಾಯಿತಿಯನ್ನು ಮಂಡಳಿಯು ಮನ್ನಾ ಮಾಡುತ್ತದೆ. ಅಂತಹ ಪ್ರಕರಣಗಳ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ಆಯಾ ಡಯಟ್ ಪ್ರಾಂಶುಪಾಲರ ಮುಖಾಂತರ ಸೂಕ್ತ ದಾಖಲೆ ಹಾಗೂ ವಿವರಣೆಗಳೊಂದಿಗೆ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿ ಸಾಕಷ್ಟು ಮುಂಚಿತವಾಗಿ ಮಂಡಳಿಯ ಅನುಮತಿ ಪಡೆಯುವುದು.

**8. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ:-**

ಪ್ರಥಮ/ದ್ವಿತೀಯ ಡಿ.ಪಿ.ಇಡಿ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಮಂಡಳಿಯಿಂದ ಅನುಮತಿ ಪಡೆದಿರಬೇಕು. ಅನುಮತಿ ಪಡೆದಿರುವ ಆದೇಶದ ಪ್ರತಿಯೊಂದಿಗೆ ಡಯಟ್ ಮುಖಾಂತರ ಮಂಡಳಿಗೆ ಸಲ್ಲಿಸಬೇಕು. ತದನಂತರ ಸಂಬಂಧಿಸಿದ ಸಂಸ್ಥೆಯ Login ಗೆ ಆ ಅಭ್ಯರ್ಥಿಯ ಅರ್ಜಿ ನಮೂನೆಯನ್ನು Upload ಮಾಡಲಾಗುವುದು.

**9. ಪರೀಕ್ಷಾ ಅವ್ಯವಹಾರಗಳಿಂದ ಉಚ್ಛಾಟಿಸಿರುವ (ಎಂ.ಎಲ್.ಪಿ) ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಪಿ.ಇಡಿ ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಛಾಟನೆಗೊಂಡಿರುವ ಅಭ್ಯಥಿಗಳ ಉಚ್ಛಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ಅಭ್ಯರ್ಥಿಗಳು ಮುಂದಿನ ಸಾಲಿನಲ್ಲಿ ಮುಖ್ಯ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್‌ನ್ನು ನೇರವಾಗಿ ಡಯಟ್ ಮೂಲಕ ಮಂಡಳಿಗೆ ಸಲ್ಲಿಸುವುದು. ಮಂಡಳಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಂಡಳಿಯಿಂದ ಪ್ರತ್ಯೇಕವಾಗಿ Online ಅರ್ಜಿ Upload ಮಾಡಲಾಗುವುದು.

**10. ಪ್ರಥಮ ಡಿ.ಇಎಲ್.ಇಡಿ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ**

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| ದೈಹಿಕ ಶಿಕ್ಷಣದ ತಳಹದಿಗಳು | 101 EK | 80 | 3 ಗಂಟೆ |
| ಶರೀರ ರಚನಾ ಮತ್ತು ಗುಣಧರ್ಮ ಶಾಸ್ತ್ರ | 102 EK | 80 | 3 ಗಂಟೆ |
| ದೈಹಿಕ ಶಿಕ್ಷಣದ ಪಠ್ಯಕ್ರಮ ಸಂವಹನೆ ಮತ್ತು ಶಿಕ್ಷಣ ಶಾಸ್ತ್ರ | 103 EK | 80 | 3 ಗಂಟೆ |
| ಅನ್ವಯಿಕ ದೈಹಿಕ ಶಿಕ್ಷಣ ಮತ್ತು ಯೋಗ | 104 EK | 80 | 3 ಗಂಟೆ |
| ಭಾಷಾ ಸಂಪದೀಕರಣ ಕನ್ನಡ | 105 K | 80 | 3 ಗಂಟೆ |
| ಭಾಷಾ ಸಂಪದೀಕರಣ ಇಂಗ್ಲೀಷ್ | 106 E | | |

**11. ದ್ವಿತೀಯ ಡಿ.ಪಿ.ಇಡಿ ಬಾಹ್ಯ ವಿಷಯಗಳ ವಿವರ, ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ,**

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| ದೈಹಿಕ ಶಿಕ್ಷಣದ ನಿರ್ವಹಣೆ | 201 EK | 80 | 3 ಗಂಟೆ |

| | | | |
|---|---|---|---|
| ಆರೋಗ್ಯ ಮತ್ತು ಪರಿಸರ ಶಿಕ್ಷಣ | 202 EK | 80 | 3 ಗಂಟೆ |
| ದೈಹಿಕ ಶಿಕ್ಷಣದಲ್ಲಿ ಶೈಕ್ಷಣಿಕ ಮನೋವಿಜ್ಞಾನ | 203 EK | 80 | 3 ಗಂಟೆ |
| ಕ್ರೀಡಾಧಿಕಾರತ್ವ ಮತ್ತು ಕ್ರೀಡಾ ಶಿಕ್ಷಣದ ತತ್ವಗಳು | 204 EK | 80 | 3 ಗಂಟೆ |
| ವಿಷಯಾಧಾರಿತ ಬೋಧನಾ ಪದ್ಧತಿ ಕನ್ನಡ | 205 K | 80 | 3 ಗಂಟೆ |
| ವಿಷಯಾಧಾರಿತ ಬೋಧನಾ ಪದ್ಧತಿ ಇಂಗ್ಲೀಷ್ | 206 E | | |

**12. ಪ್ರಯತ್ನಗಳ ಮಿತಿ:-**

ದ್ವಿತೀಯ ಡಿ.ಪಿ.ಇಡಿ ವ್ಯಾಸಂಗ ಮಾಡಿದ ವರ್ಷದಿಂದ ಮೂರು ವರ್ಷ(ಸತತ ಮೂರು ಪ್ರಯತ್ನದೊಳಗೆ) ಪ್ರಥಮ ಮತ್ತು ದ್ವಿತೀಯ ಡಿ.ಪಿ.ಇಡಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಬೇಕು. ಅದರನ್ವಯ ಪರೀಕ್ಷೆ ತೆಗೆದುಕೊಂಡಿರುವ /ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಅಂತಿಮ ಕಾಲಾವಕಾಶವಾಗುತ್ತದೆ.

**ಡಿ.ಎಸ್.ಇ.ಆರ್.ಟಿಯ ಡಿಪ್ಲೊಮೊ ಇನ್ ಫಿಜಿಕಲ್ ಎಜುಕೇಷನ್‌ನ Curriculum & Syllabus 2005ರ ಪುಟ ಸಂಖ್ಯೆ:22 ಕ್ರಮ ಸಂಖ್ಯೆ:7ರಲ್ಲಿ ನಮೂದಿಸಿರುವಂತೆ ಅನುತ್ತೀರ್ಣರಾದ ಡಿ.ಪಿ.ಇಡಿ ಅಭ್ಯರ್ಥಿಗಳಿಗೆ ಉತ್ತೀರ್ಣರಾಗಲು ಪ್ರಯತ್ನಗಳ ಮಿತಿಯನ್ನು ಮೂರು ಸತತ ಪರೀಕ್ಷೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.** ಈ ಬಗ್ಗೆ ನಿಮ್ಮ ಸಂಸ್ಥೆಯ ಹೊಸ ಮತ್ತು ಪುನರಾವರ್ತಿತ ಅಭ್ಯರ್ಥಿಗಳ ಗಮನಕ್ಕೆ ತರತಕ್ಕದ್ದು. ಅಲ್ಲದೇ ಸಂಸ್ಥೆಯವರು ಅಭ್ಯರ್ಥಿಗಳಿಂದ ಪರೀಕ್ಷಾ ಅರ್ಜಿ ಪಡೆಯುವ ಮುನ್ನ ಈ ವಿಷಯದ ಬಗ್ಗೆ ಗಮನ ಹರಿಸದಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ. ಈ ವಿಚಾರವನ್ನು ವಿದ್ಯಾರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಂದು ಅಂತಿಮ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು. **ಅಂತಿಮ ಕಾಲಾವಕಾಶದ ಬಗ್ಗೆ ಮನದಟ್ಟು ಮಾಡುವುದು. ವ್ಯಾಪಕ ಪ್ರಚಾರ ಮಾಡುವುದು. ಆಯಾ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ.**

| ಕ್ರಮ ಸಂಖ್ಯೆ | ದ್ವಿತೀಯ ಡಿ.ಪಿ.ಇಡಿ ವ್ಯಾಸಂಗ ಮಾಡಿದ ಶೈಕ್ಷಣಿಕ ವರ್ಷದ ಮುಖ್ಯ ಪರೀಕ್ಷೆ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| **01** | **ಮೇ-ಜೂನ್ 2018** | **ಮೇ-ಜೂನ್ 2021** |
| **02** | **ಮೇ-ಜೂನ್ 2019** | **ಮೇ-ಜೂನ್ 2022** |

**13. ಡಯಟ್ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ಕರ್ತವ್ಯಗಳು. ಹಾಗೂ ಗಮನಿಸಬೇಕಾದ ಅಂಶಗಳು:**

- ಡಿ.ಪಿ.ಇಡಿ ಕಾಲೇಜು ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವುದನ್ನು ಹಾಗೂ ರೂ.1300/- ಶುಲ್ಕವನ್ನು ಪಾವತಿಸಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಅನುಮೋದನೆ ಮಾಡಬೇಕು. ಎನ್.ಸಿ.ಟಿ.ಇ ಮಾನ್ಯತೆ ಪಡೆಯದ ಅನಧಿಕೃತ ಸಂಸ್ಥೆಗಳ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಎನ್.ಸಿ.ಟಿ.ಇ ಮಾನ್ಯತೆ ಹಿಂಪಡೆದ ಡಿ.ಪಿ.ಇಡಿ ಕಾಲೇಜುಗಳ ಅಭ್ಯರ್ಥಿಗಳು ಸಹ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಸರ್ಕಾರ ಅಥವಾ ಎನ್.ಸಿ.ಟಿ.ಇ ಯಿಂದ ನಿಗಧಿಪಡಿಸಿರುವ ದಾಖಲಾತಿ ಮಿತಿಯೊಳಗೆ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರಬೇಕು.

- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ಅನುಮತಿ ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಸಂಸ್ಥೆ ನಡೆಯುತ್ತಿರಬೇಕು. ಸರ್ಕಾರ ಅಥವಾ ಎನ್.ಸಿ.ಟಿ.ಇ ಅನುಮತಿ / ಆದೇಶವಿಲ್ಲದೆ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿಲ್ಲ.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಲಾಗಿರುವ ಮಾಧ್ಯಮಕ್ಕೆ ಸಂಸ್ಥೆಯವರು ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಿರಬೇಕು. ಜಿಲ್ಲಾ ಡಯಟ್ ಪ್ರಾಂಶುಪಾಲರುಗಳು ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಿರುವ ಮಾಧ್ಯಮಕ್ಕೆ ದಾಖಲಾತಿ ಅನುಮೋದಿಸಿರಬೇಕು.
- ಮಾಧ್ಯಮ ಬದಲಾವಣೆಗೆ ಸರ್ಕಾರದ ಅನುಮತಿ ಅಗತ್ಯತೆ ಇದೆ. ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಸಂಸ್ಥೆ ಮಾಧ್ಯಮ ಬದಲಾವಣೆ ಮಾಡಿಕೊಂಡಿದ್ದಲ್ಲಿ ಆ ಸಂಸ್ಥೆಯ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಕೇಂದ್ರೀಕೃತ ದಾಖಲಾತಿ ಘಟಕದಿಂದ ಸರ್ಕಾರಿ ಕೋಟಾಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿರಬೇಕು. ಹಂಚಿಕೆ ಮಾಡಿರುವ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಆನ್-ಲೈನ್ ಮೂಲಕ ಅಭ್ಯರ್ಥಿಗಳ ಆಂತರಿಕ ಹಾಗೂ ಪ್ರಾಯೋಗಿಕ ಅಂಕಗಳನ್ನು ಡಯಟ್ ಲಾಗಿನ್‌ನಲ್ಲಿ ಪರಿಶೀಲಿಸಿ ಅನುಮೋದಿಸುವುದು.
- ಆನ್-ಲೈನ್ ಮೂಲಕ ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಡಯಟ್ ಲಾಗಿನ್‌ನಲ್ಲಿ ಪರಿಶೀಲಿಸಿ ಅನುಮೋದಿಸುವುದು.
- ಆಡಳಿತ ಮಂಡಳಿ ಕೋಟಾ ಅಭ್ಯರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ ((Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿ ಕೇಂದ್ರಿಕೃತ ದಾಖಲಾತಿ ಘಟಕ ಅಥವಾ ಸರ್ಕಾರದಿಂದ ಅನುಮತಿ ಪಡೆದು ಸರ್ಕಾರಿ ಕೋಟಾದ ಉಳಿಕೆ ಸೀಟುಗಳಿಗೆ ದಾಖಲಾತಿ ಮಾಡಿಕೊಂಡಿದ್ದಲ್ಲಿ, ಡಯಟ್ ಪ್ರಾಂಶುಪಾಲರಿಂದ ಅನುಮೋದಿತವಾಗಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿ.ಪಿ.ಇಡಿ ಕಾಲೇಜುಗಳು ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಳಿಯಿಂದ ಕೇಳಿದಾಗ ಅದನ್ನು ಮಂಡಳಿಗೆ ಸಲ್ಲಿಸುವುದು.
- ಡಯಟ್ ಹಂತದಲ್ಲಿ ಕಾಲೇಜುಗಳಿಂದ ಸ್ವೀಕರಿಸಲಾದ ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಚಲನ್‌ಗಳನ್ನು ಪರಿಶೀಲಿಸಿ ಚಲನ್‌ಗಳನ್ನು ಕ್ರೋಢೀಕರಿಸಿ ಮಂಡಳಿಗೆ ಕಳುಹಿಸುವುದು.

**14.** ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶಿಲಿಸಿ ಸಂಸ್ಥೆಯ Loginಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ಮಂಡಳಿಯಿಂದ ಸೂಚಿಸಲ್ಪಟ್ಟ ನಿಗದಿತ ದಿನದೊಳಗೆ ದೋಷಗಳಿದ್ದಲ್ಲಿ ಸರಿಪಡಿಸುವುದು.

**15. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಸಲ್ಲಿಸುವ ಬಗ್ಗೆ.**

ಈ ಸಾಲಿನಿಂದ ಅಭ್ಯರ್ಥಿಗಳು ಪಡೆದ ಆಂತರಿಕ ಮೌಲ್ಯಮಾಪನ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್‌ಲೈನ್‌ನಲ್ಲಿಯೇ ಭರ್ತಿ ಮಾಡಬೇಕಾಗುತ್ತದೆ. ಇದಕ್ಕಾಗಿ ಸಂಸ್ಥೆಗಳ ಲಾಗಿನ್‌ನಲ್ಲಿ ನಮೂನೆಗಳನ್ನು ಅಪ್‌ಲೋಡ್

**15. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಸಲ್ಲಿಸುವ ಬಗ್ಗೆ.**

ಈ ಸಾಲಿನಿಂದ ಅಭ್ಯರ್ಥಿಗಳು ಪಡೆದ ಆಂತರಿಕ ಮೌಲ್ಯಮಾಪನ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್‌ಲೈನ್‌ನಲ್ಲಿಯೇ ಭರ್ತಿ ಮಾಡಬೇಕಾಗುತ್ತದೆ. ಇದಕ್ಕಾಗಿ ಸಂಸ್ಥೆಗಳ ಲಾಗಿನ್‌ನಲ್ಲಿ ನಮೂನೆಗಳನ್ನು ಅಪ್‌ಲೋಡ್ ಮಾಡಲಾಗುವುದು. ಸಮನ್ವಯ ಸಮಿತಿಯು ಮೌಲ್ಯಮಾಪನ ಮಾಡಿ ನೀಡಿರುವ ಅಂಕಗಳನ್ನು Upload ಮಾಡಲಾದ ನಮೂನೆಗಳಲ್ಲಿ " Online Mark Porting" ಮೂಲಕ ಮಂಡಳಿಗೆ ಸಲ್ಲಿಸಬೇಕು.

ಸಂಸ್ಥೆಗಳ ಮುಖ್ಯಸ್ಥರು ಈ ಅಂಕಗಳನ್ನು ಭರ್ತಿ ಮಾಡಿ ಸಲ್ಲಿಸಿದ ನಂತರ ಸಂಬಂಧಿಸಿದ ಡಯಟ್‌ಗೆ ಸಮನ್ವಯ ಸಮಿತಿಯು ನೀಡಿದ ಮೂಲ ದಾಖಲೆಗಳನ್ನು ಸಲ್ಲಿಸಬೇಕು. ಡಯಟ್ ಪ್ರಾಂಶುಪಾಲರು ಸಮನ್ವಯಸಮಿತಿಯು ನೀಡಿರುವ ಅಂಕಗಳಿಗೂ ಹಾಗೂ ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡಿರುವ ಅಂಕಗಳಿಗೂ ತಾಳೆಯಾಗುತ್ತಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಇದನ್ನು ಅನುಮೋದಿಸಬೇಕು. ವ್ಯತ್ಯಾಸವಿದ್ದಲ್ಲಿ ಡಯಟ್ ಪ್ರಾಂಶುಪಾಲರು ಇದನ್ನು ಮಂಡಳಿಯ ಗಮನಕ್ಕೆ ತರುವುದು.

ಒಂದು ವೇಳೆ ವ್ಯತ್ಯಾಸವಾದಲ್ಲಿ ಪ್ರತಿ ದೋಷಕ್ಕೆ ಸಂಸ್ಥೆಯ ಮುಖ್ಯಸ್ಥರಿಗೆ ತಲಾ ರೂ.1000/–ದಂತೆ ದಂಡ ವಿಧಿಸಲಾಗುವುದು. ದಂಡವನ್ನು ಪಾವತಿಸಿ ಡಯಟ್ ಪ್ರಾಂಶುಪಾಲರ ಮುಖಾಂತರ ಮನವಿ ಸಲ್ಲಿಸಿದಲ್ಲಿ ಸರಿಪಡಿಸುವ ಬಗ್ಗೆ ಕ್ರಮವಹಿಸಲಾಗುವುದು. ಈ ಕುರಿತಂತೆ ಮಾರ್ಗಸೂಚನೆಗಳೊಂದಿಗೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ನೀಡಲಾಗುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಡಯಟ್ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

<u>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ</u>

**1.ಶ್ರೀ ಎಸ್.ಎನ್ ರಮೇಶ್, ಹಿರಿಯ ಸಹಾಯಕ ನಿರ್ದೇಶಕರು, ಡಿ.ಪಿ.ಇಡಿ ಶಾಖೆ, ಮೊಬೈಲ್ ಸಂಖ್ಯೆ:9611237631**

**2.ಶ್ರೀ ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ ಮೊಬೈಲ್ ಸಂಖ್ಯೆ:7892195954**

1/7/2021

**(ಎಸ್.ಗೀತಾ)**
**ನಿರ್ದೇಶಕರು (ಇತರೆ ಪರೀಕ್ಷೆಗಳು)**
**ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು**

<u>ಪ್ರತಿಗಳು :–</u>

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
3. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಪ್ರತಿ.